ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಮಾಹೆಯಾನ ರೂ ೧೫೦-೦೦

ಆ) ೧. ಸಾಹಿತ್ಯ, ಕಲೆ ಹಾಗೂ ಇತರೆ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕಷ್ಟ ಪರಿಸ್ಥಿತಿಯಲ್ಲಿರುವವರು ಮಾಸಾಶನ ಪಡೆಯಲು ಅರ್ಹರು.

೨. ಇವರ ವಯಸ್ಸು ೫೮ ವರ್ಷಕ್ಕಿಂತ ಕಡಿಮೆ ಇರಬಾರದು.

೩. ಆದಾಯ ವರ್ಷಕ್ಕೆ ರೂ ೧,೮೦೦-೦೦ ಒಳಗಿರಬೇಕು.

೪. ಅಂಗವಿಕಲ ಕಲಾವಿದರಿಗೆ ವಯಸ್ಸು ೪೦ ವರ್ಷಗಳಾಗಿದ್ದರೆ ಹಾಗೂ ೨೦ ವರ್ಷಗಳ ಸೇವೆ ಸಲ್ಲಿಸಿದ್ದರೆ ಮಾಸಾಶನ ಮಂಜೂರಾತಿಗೆ ಅರ್ಜಿಯನ್ನು ಪರಿಗಣಿಸಬಹುದಾಗಿದೆ.

ಇ) ಬಂದಿರುವುದಿಲ್ಲ.

ಜಮಖಂಡಿಯಲ್ಲಿ ಟಿ. ಬಿ. ಸೆಂಟರನ್ನು ತೆರೆಯುವ ಬಗ್ಗೆ

೫೩ (೧೫೩) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) —ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಜಮಖಂಡಿ ಮತ್ತು ಸುತ್ತಮುತ್ತಲಿನ ನಗರಗಳಲ್ಲಿ ಸಾವಿರಾರು ಬೀಡಿ ಕಾರ್ಮಿಕರಿರುವುದು ಜಮಖಂಡಿಯಲ್ಲಿ ಪ್ರತ್ಯೇಕವಾದ ಕ್ಷಯ ರೋಗ ಕೇಂದ್ರವನ್ನು ತೆರೆಯುವ ಅಲೋಚನೆ ಸರ್ಕಾರ ದವರಿಗಿದೆಯೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಬಿಜಾಪುರದಲ್ಲಿ ಈಗಾಗಲೇ ೧೧೦ ಹಾಸಿಗೆಗಳುಳ್ಳ ಒಂದು ಕ್ಷಯರೋಗ ಆಸ್ಪತ್ರೆ ಇದೆ. ಬೀಡಿ ಕಾರ್ಮಿಕರಿಗಾಗಿಯೇ ಈ ಆಸ್ಪತ್ರೆಯಲ್ಲಿ ೧೦ ಹಾಸಿಗೆಗಳನ್ನು ಕಾದಿರಿಸಲಾಗಿದೆ. ಆದ್ದರಿಂದ ಜಮಖಂಡಿಯಲ್ಲಿ ಪ್ರತ್ಯೇಕವಾದ ಕ್ಷಯ ರೋಗ ಕೇಂದ್ರವನ್ನು ತೆರೆಯುವ ಅಲೋಚನೆಯು ಸರಕಾರಕ್ಕಿಲ್ಲ.

ಇಲಾಖಾ ಸಲಹಾ ಸಮಿತಿಗಳ ಬಗ್ಗೆ

೫೪ (೧೧೮) ಶ್ರೀ ಬಾಬು ರೆಡ್ಡಿ ತುಂಗಳ್ (ಬೀಳಗಿ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಳೆದ ವರ್ಷ ಸರಕಾರದವರು ನಿಯಮಿಸಿದ ಇಲಾಖಾ ಸಲಹಾ ಸಮಿತಿಗಳು ಎಷ್ಟು ? (ವಿವರ ತಿಳಿಸುವುದು)

(ಆ) ನೇಮಕವಾದ ವಿವಿಧ ಸಲಹಾ ಸಮಿತಿಗಳು ಇಡೀ ವರ್ಷ ಕರೆದ ಸಭೆಗಳ ಸಂಖ್ಯೆ ಎಷ್ಟು?

(ಇ) ಹಾಗೆ ಕರೆಯದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು?

(ಈ) ವರ್ಷದಲ್ಲಿ ಇಂತಿಷ್ಟು ಸಭೆ ಕರೆಯಬೇಕೆಂಬ ನಿಯಮವೇನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)

(ಅ) ೨೬ (ಸಮಿತಿಯ ಹೆಸರುಗಳು ಅನುಬಂಧ ''ಅ'' ದಲ್ಲಿ ಇವೆ).

(ಆ) ೨೨.

(ಇ) ಉದ್ಭವಿಸುವುದಿಲ್ಲ.

(ಈ) ಇಲ್ಲ.